ಕಥೆ

# ಯುದ್ಧ, ಸಂಧಾನ ಮತ್ತು ಹರಿದ ಚಪ್ಪಲಿ



■ ಕೇಶವರೆಡ್ಡಿ ಹಂದ್ರಾಳ

‘ಅಮ್ಮ ಕಾಲು ತುಂಬಾ ನೋಯುತ್ತಿವೆ, ನಾನಿನ್ನು ನಡೆಯಲಾರೆ’– ಆರು ವರ್ಷಗಳ ಮಗ ರಶೀದ ದೀನನಾಗಿ ಅಮ್ಮನ ಕಡೆ ನೋಡಿದ್ದ. ಅವಳು ಬ್ಯಾಗು ಬಿಚ್ಚಿ ಉಳಿದಿದ್ದ ಕೊನೆಯ ಬಿಸ್ಕತ್ತು ಪೊಟ್ಟಣವನ್ನು ಹರಿದು ಅದರೊಳಗಿಂದ ಮೂರು ಬಿಸ್ಕತ್ತುಗಳನ್ನು ಮಗನಿಗೆ ಕೊಡುತ್ತಾ, ‘ಇನ್ನು ಸ್ವಲ್ಪ ದೂರ ಸುಧಾರಿಸಿಕೊ ಮಗನೆ, ನಾಳೆ ಮಧ್ಯಾಹ್ನದ ಹೊತ್ತಿಗೆಲ್ಲ ನಾವು ನಿರಾಶ್ರಿತರ ಶಿಬಿರವನ್ನು ತಲುಪುತ್ತೇವೆ. ಅಲ್ಲಿ ಊಟ, ವಸತಿ ಇನ್ನಿತರ ಎಲ್ಲಾ ಸೌಲಭ್ಯಗಳೂ ಇರುವವಂತೆ. ಯುದ್ಧ ಮುಗಿಯುವವರೆಗೂ ನಾವು ಅಲ್ಲೇ ಇದ್ದು, ಒಂದು ವೇಳೆ ನಿನ್ನ ಪಪ್ಪಾ ಕೂಡ ಅಲ್ಲಿಗೆ ಬಂದರೆ ಮತ್ತೆ ನಮ್ಮೂರಿಗೆ ವಾಪಸ್ಸು ಬರೋಣ’. ಸಂತೈಸುವ ಧ್ವನಿಯಲ್ಲಿ ಸಮಾಧಾನ ಮಾಡಿದ್ದಳು. ಅವಳ ಹೆಸರು ಹಮೀದಾ ಬೇಗಂ.

ಪ್ರೈಮರಿ ಶಾಲೆಯೊಂದರಲ್ಲಿ ಶಿಕ್ಷಕಿ. ಪಕ್ಕದ ದೇಶ ಮತ್ತು ತಮ್ಮ ದೇಶದ ನಡುವೆ ಯುದ್ಧ ಶುರುವಾಗಿ ಹತ್ತು ದಿನಗಳಾಗಿದ್ದವು. ಎಲ್ಲಿ ನೋಡಿದರೂ ಸಾವು ನೋವುಗಳದೇ ಸುದ್ದಿ. ಪ್ರಮುಖ ನಗರಗಳ ಮೇಲೆ ಶತ್ರು ದೇಶ ದಾಳಿ ಮಾಡಿ ಬಾಂಬುಗಳ ಮಳೆಯನ್ನು ಸುರಿಯುತ್ತಿದೆ. ನೂರಾರು ಜನ ಇಂಥ ದಾಳಿಗಳಲ್ಲಿ ಜೀವ ಕಳೆದುಕೊಂಡಿದ್ದಾರೆ. ಸಾವಿರಾರು ಜನ ಗಾಯಾಳುಗಳು ಆಸ್ಪತ್ರೆಗಳಲ್ಲಿ ನರಳುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಜಾಗವಿಲ್ಲದೆ ರಸ್ತೆಗಳಲ್ಲೇ ಗಾಯಾಳುಗಳು ನರಳುತ್ತಾ ಬಿದ್ದಿದ್ದಾರೆ. ತಮ್ಮ ದೇಶದ ಸೈನಿಕರು ಕೂಡಾ ಶತ್ರು ರಾಷ್ಟ್ರದ ಮೇಲೆ ದಾಳಿ ಮಾಡಿ ಆ ಕಡೆಯ ಜನರನ್ನು ಹತ್ಯೆಗೈಯುತ್ತಿರುವರೆಂದು ದೇಶದ ಅಧ್ಯಕ್ಷರು ರೇಡಿಯೊ, ಟೀವಿಗಳಲ್ಲಿ ಹೇಳುತ್ತಾ ಜನರು ಧೈರ್ಯಗೆಡದಂತೆ ಇರಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದಾರೆ. ಅವಳದು ಕೆಳ ಮಧ್ಯಮ ವರ್ಗದ ಕುಟುಂಬವಾದ್ದರಿಂದ ಅವಳ ಗಂಡ ಎರಡು ವರ್ಷಗಳ ಹಿಂದೆಯಷ್ಟೇ ಸೈನ್ಯಕ್ಕೆ ಸೇರಿದ್ದ. ಅಧ್ಯಕ್ಷರ ನೂರಾರು ಅಂಗರಕ್ಷಕ ಪಡೆಯಲ್ಲಿ ಅವನೂ ಒಬ್ಬನಾಗಿ ಸೇವೆ ಸಲ್ಲಿಸುತ್ತಿದ್ದ. ತಮ್ಮ ಒಬ್ಬನೇ ಮಗನನ್ನು ಚೆನ್ನಾಗಿ ಓದಿಸಿ ಯಾವುದಾದರೂ ವಿದೇಶಕ್ಕೆ ಕೆಲಸಕ್ಕೆ ಕಳುಹಿಸಿ ತಾವೂ ಅವನೊಂದಿಗೆ ಹೋಗಿ ನೆಮ್ಮದಿಯ ಜೀವನ ನಡೆಸಬೇಕೆಂದು ಗಂಡ ಹೆಂಡತಿ ಮಾತನಾಡಿಕೊಂಡಿದ್ದರು. ಹಾಗಾಗಿ ಅವಳು ತನ್ನ ಮನೆಯ ಹತ್ತಿರದಲ್ಲೇ ಇದ್ದ ಖಾಸಗಿ ಪ್ರೈಮರಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿಕೊಂಡಿದ್ದಳು. ಗಂಡ ತಿಂಗಳಿಗೊಮ್ಮೆ ಬಂದು ಐದಾರು ದಿನಗಳಿದ್ದು ಮತ್ತೆ ರಾಜಧಾನಿಯಲ್ಲಿದ್ದ ಅಧ್ಯಕ್ಷರ ಅರಮನೆಗೆ ತೆರಳುತ್ತಿದ್ದ. ಮಗ ರಶೀದ ಚಿಕ್ಕಂದಿನಲ್ಲಿಯೇ ಬುದ್ಧಿವಂತಿಕೆಯ ಎಲ್ಲಾ ಲಕ್ಷಣಗಳು ಹೊಂದಿದ್ದನಲ್ಲದೆ ತನ್ನ ತಾಯಿ ಶಿಕ್ಷಕಿಯಾಗಿದ್ದ ಶಾಲೆಯಲ್ಲಿಯೇ ಒಂದನೇ ಇಯತ್ತೆಗೆ ಸೇರಿದ್ದ. ತರಗತಿಯಲ್ಲಿ ಎಲ್ಲರಿಗಿಂತ ಅವನೇ ಜಾಣ ಹುಡುಗನೆಂದು ಹೆಸರು ಗಳಿಸಿದ್ದ. ಮೂರು ದಿನಗಳ ಹಿಂದೆ ಅವಳ ಸ್ಕೂಲಿನ ಮೇಲೂ ಯುದ್ಧ ಪಾತಕಿಗಳು ಬಾಂಬ್ ಹಾಕಿದ್ದರು. ಬಾಂಬ್ ದಾಳಿಯಲ್ಲಿ ಶಾಲೆಯ ಐದು ಮಕ್ಕಳು ಸಾವಿಗೀಡಾಗಿದ್ದರಲ್ಲದೆ, ಮೂವತ್ತಕ್ಕಿಂತಲೂ ಹೆಚ್ಚು ಮಕ್ಕಳಿಗೆ ಗಂಭೀರವಾದ ಗಾಯಗಳಾಗಿದ್ದವು. ಅದೃಷ್ಟವಶಾತ್ ಹಮೀದಾ ಮತ್ತು ಅವಳ ಮಗ ಅಪಾಯದಿಂದ ಪಾರಾಗಿದ್ದರು. ಆದರೆ ಹಮೀದಾಳ ಮನೆ ಬಾಂಬ್ ದಾಳಿಯಲ್ಲಿ ನೆಲಸಮವಾಗಿತ್ತು. ಇದರಿಂದಾಗಿ ಮಗ ರಶೀದ ಮಾನಸಿಕ ಆಘಾತಕ್ಕೊಳಗಾಗಿದ್ದ. ಊರಿನ ಮೇಲೆ ಮತ್ತಷ್ಟು ದಾಳಿಗಳು ನಡೆಯುವ ಅಪಾಯವಿರುವುದರಿಂದ ತಾಲ್ಲೂಕು ಆಡಳಿತ ಜನರಿಗೆ ಊರು ಖಾಲಿ ಮಾಡಿ ನಿರಾಶ್ರಿತರ ಶಿಬಿರಗಳಿಗೆ ಹೋಗಲು ಆದೇಶಿಸಿತ್ತು. ಹಾಗಾಗಿ ಬೇರೆ ಜನರಂತೆ ಅವಳೂ ತನ್ನ ಮಗನನ್ನು ಕರೆದುಕೊಂಡು ದೂರದ ನಿರಾಶ್ರಿತರ ಶಿಬಿರದ ಕಡೆ ನಡೆಯುತ್ತಿದ್ದಳು.

‘ಯುದ್ಧ ಎಂದರೆ ಏನಮ್ಮ...’ ಒಂದು ಬಿಸ್ಕತ್ತನ್ನು ತಿಂದು ಕನವರಿಸುವವನಂತೆ ಕೇಳಿದ್ದ ಮಗ. ಕ್ಷಣ ಕಾಲ ಏನು ಉತ್ತರಿಸಬೇಕೆಂದು ತೋಚದೆ, ‘ಯುದ್ಧ ಎಂದರೆ ವಿನಾಶ ಮಗನೆ. ಯುದ್ಧ ಮಾನವ ಕುಲಕ್ಕೆ ತಟ್ಟಿದ ಬಹುದೊಡ್ಡ ಶಾಪ. ಯುದ್ಧ ಎಲ್ಲರ ಹೊಟ್ಟೆಯಲ್ಲೂ ಬೆಂಕಿಯನ್ನು ಸುರಿಯುತ್ತದೆ. ಕರುಣೆ, ಮನುಷ್ಯತ್ವಗಳನ್ನು ಸುಡುವ ಕುಲುಮೆ ಯುದ್ಧ’ ಎಂದು ಮಗನ ತಲೆ ನೇವರಿಸುತ್ತಾ ಹೇಳಿದ್ದಳು. ಅವಳ ಮಾತುಗಳನ್ನು ಕೇಳಿದ, ಪಕ್ಕದಲ್ಲಿ ಅವರಂತೆಯೇ ನಿರಾಶ್ರಿತರ ಶಿಬಿರದ ಕಡೆ ತನ್ನ ವಯಸ್ಸಾದ ಅಮ್ಮನನ್ನು ಮತ್ತು ಅಪ್ಪನನ್ನು ಬಡಕಲು ಒಂಟೆಯ ಮೇಲೆ ಕೂರಿಸಿಕೊಂಡು ನಡೆಯುತ್ತಿದ್ದ ವ್ಯಕ್ತಿ, ‘ಯುದ್ಧ ಯಾರಿಗೆ ಬೇಕಾಗಿದೆ ತಂಗಿ. ಮನುಷ್ಯರ ಶರೀರದಲ್ಲಿ ಸೈತಾನರು ಸೇರಿಕೊಂಡಿದ್ದಾರೆ. ಈ ಸೈತಾನರು ಅರಮನೆಯಲ್ಲಿ ಕುಳಿತು ಸಾಮಾನ್ಯ ಜನರ